**O.S.24/2022**
**P.W.-1**

ಸಾಕ್ಷಿಯನ್ನು ದಿನಾಂಕ **30-01-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು:- ಪ್ರತಿವಾದಿಪರ ಪರ ಶ್ರೀ ಜಿ.ಕೆ. ವಕೀಲರಿಂದ.

ದಾವಾ ಅನುಸೂಚಿ ' ಎ' ಮತ್ತು ' ಬಿ' ಅನುಸೂಚಿ ಸ್ವತ್ತುಗಳಲ್ಲಿ ಮನೆ ಕಟ್ಟಿರುತ್ತೇನೆ ಎಂದು ಹೇಳಿದ್ದು ಸದರಿ ಮನೆಯನ್ನು ಯಾವಾಗ ಕಟ್ಟಿರುತ್ತೇನೆ

ಎಂದರೆ? ಸಾಕ್ಷಿಯು ಸದರಿ ಮನೆಯನ್ನು 2003 ರಲ್ಲಿ ಪರಿಷ್ಕರಣೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಎ ಅನುಸೂಚಿ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದರೆ? ಸಾಕ್ಷಿಯು 35 X 40 ಅಡಿ ಎಂದು ಹೇಳುತ್ತಾರೆ. ದಾವಾ ಎ ಅನುಸೂಚಿ ಸ್ವತ್ತಿನಲ್ಲಿ ಮಂಗಳೂರು ಹಂಚಿನ ಮನೆಯ ವಿಸ್ತೀರ್ಣ ಹಾಕಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಮಂಗಳೂರು ಹಂಚಿನ ಮನೆಯಲ್ಲಿ ಒಟ್ಟು ಎಷ್ಟು ಕೋಣೆಗಳು ಇರುತ್ತವೆ ಎಂದರೆ? ಸಾಕ್ಷಿಯು ಪ್ರತಿವಾದಿ ಒತ್ತುವರಿ ಮಾಡುವ ಸಂದರ್ಭದಲ್ಲಿ ಒಟ್ಟು 8 ಕೋಣೆಗಳು ಇದ್ದವು ಮತ್ತು ಈಗ ಬದಲಾವಣೆಯಾಗಿರಬಹುದು ಎಂದು ಹೇಳುತ್ತಾರೆ.

ನಾನು ದಾವಾ ಸ್ವತ್ತನ್ನು ಮಂಜೂರಾತಿ ಮಾಡಿಕೊಡುವಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 94(ಸಿ) ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಮೋಜನಿ ಮಾಡಿ, ನಕ್ಷೆ ತಯಾರಿಸಿ ನನ್ನ ಹೆಸರಿಗೆ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ 4 ನೇ ಕಂಡಿಕೆಯಲ್ಲಿ ಹೇಳಿದ್ದು ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ? ಸಾಕ್ಷಿಯು ನನ್ನ ಹತ್ತಿರ ಇದ್ದ

ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಅರ್ಜಿ ಸಲ್ಲಿಸಿ ದಾಖಲೆಗಳನ್ನು ಪಡೆದುಕೊಂಡು ಹಾಜರುಪಡಿಸುತ್ತೀರಾ ಎಂದರೆ? ಸಾಕ್ಷಿಯು ದಾಖಲೆಗಳನ್ನು ಪಡೆದುಕೊಳ್ಳಲು ಅರ್ಜಿ ಸಲ್ಲಿಸಿತ್ತೇನೆ ಎಂದು ಹೇಳುತ್ತಾರೆ. ನಾನು ಕಲಂ 94(ಸಿ) ಅಡಿಯಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತಿಗೆ ಅರ್ಜಿಕೊಟ್ಟಿರುತ್ತೇನೆ ಎಂದರೆ? ಸಾಕ್ಷಿಯು ಅಂದಾಜಿನಲ್ಲಿ 40X40 ಅಡಿ ವಿಸ್ತೀರ್ಣಕ್ಕೆ ಅರ್ಜಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಅರ್ಜಿಯಲ್ಲಿ ಕೊಟ್ಟಂತ ವಿಸ್ತೀರ್ಣಕ್ಕಿಂತಲೂ ಅಧಿಕಾರಿಗಳು ಜಾಸ್ತಿ ವಿಸ್ತೀರ್ಣ ಮಂಜೂರು ಮಾಡಿರುತ್ತಾರೆ ಎಂದರೆ ಸರಿ.

ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೆಂದರೆ? ಸಾಕ್ಷಿಯು ಪ್ರತಿವಾದಿ ಮತ್ತು ಅವರ ತಂದೆ-ತಾಯಿ ಸ್ವಾಧೀನದಲ್ಲಿರುತ್ತಾರೆಂದು ಹೇಳುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿಯ ತಂದೆ-ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ಈಗ ನಿ.ಪಿ.-3 ಅನ್ನು ತೋರಿಸಿ ಸದರಿ ನಕ್ಷೆಯಲ್ಲಿ ತೋರಿಸಿರುವ ಸ್ವತ್ತಿನಲ್ಲಿ ಮನೆ ಇರುವ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ? ಸಾಕ್ಷಿಯು ಸರ್ವೇ ರಿಪೋರ್ಟ್ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿ.ಪಿ.-26 ಅನ್ನು ತೋರಿಸಿ ಸದರಿ ದೂರು ಜಮೀನು ವಿಚಾರವಾಗಿ ದಾಖಲಾಗಿದ್ದು ಮನೆಯ ಬಗ್ಗೆ ಅಲ್ಲ ಎಂದರೆ ಸಾಕ್ಷಿಯು ಪೋಲೀಸರು ಆ ರೀತಿ ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳುತ್ತಾರೆ.

ನನ್ನ ಹೆಸರಿಗೆ ಮಂಜೂರಾಗಿರುವ ದಾವಾ ಸ್ವತ್ತನ್ನು ರದ್ದು ಮಾಡಬೇಕೆಂದು ಮಂಜು ಕೆ.ಎಂ. ಮತ್ತು ರಮೇಶ್ ಎನ್. ರವರು ಸಾಗರ ಉಪವಿಭಾಗಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆಂದು ಸದರಿ ಮೇಲ್ಮನವಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ.-4 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಾನು ಹಾಜರಾಗಿರುತ್ತೇನೆ. ಸದರಿ ಪ್ರಕರಣ ಇನ್ನೂ ವಿಚಾರಣೆಗೆ ಇದೆ. ಸದರಿ ಪ್ರಕರಣದಿಂದ ನಾನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ

ದಾವೆಯಲ್ಲಿ ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿಕೊಂಡು ಪ್ರತಿವಾದಿ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ**- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.